# ಕಂದ ಕಂದ ಆಲಿಸೊ ಹಾಡು Lyrics in Kannada

ಕಂದ ಕಂದ ಆಲಿಸೊ ಹಾಡು
ಕೊಂಚ ದಿವಸ ಒಳಗೆ ಆಡು
ನೆಮ್ಮದಿಯಾಗಿ ಕಾಲನು ನೀಡು
ಕೊಂಚ ತಡೆದು ಜಗವನು ನೋಡು

ಬೆರಳನು ನೀನು ಹಿಡಿಯೋ
ಸಮಯದವರೆಗೂ ತಡಿಯೋ

Bharatlyrics.com
ಈ ಗರ್ಭಾನೆ ನಿನಗೆ ಮೈದಾನವೀಗ
ದಣಿಯದೆ ನವಮಾಸ ಹಾಡಿ ಕುಣಿಯೋ

ಕಂದ ಕಂದ ಆಲಿಸೊ ಹಾಡು
ಕೊಂಚ ದಿವಸ ಒಳಗೆ ಆಡು

ನವಿಲು ಗರಿಯೊ ಕಲಕಿಸೊ
ಗೆಜ್ಜೆ ಕಟ್ಟಿ ಪುಳಕಿಸೊ
ಕೃಷ್ಣನ ಹಾಗೆ
ತುಂಟನು ನೀನು

ಕಣ್ಣ ಮುಚ್ಚೆ ಆಡುತ
ಕಲ್ಲನು ಕೂಡ ಬದುಕಿಸೊ
ರಾಮನ ಹಾಗೆ
ನೆಂಟನು ನೀನು

ಒಳ್ಳೆ ಮನುಜ ಅನ್ನೋ ಬಿರುದು
ಹುಟ್ಟೋ ಎಲ್ಲಾ ಜನರು ಬರದು

ನಿನ್ನ ಸಂಸ್ಕಾರವೊಂದೇ
ಸನ್ಮಾರ್ಗದಲ್ಲಿ
ನಡೆಸುವ ದಿಕ್ಸೂಚಿ ಕೇಳು

ಕಂದ ಕಂದ ಆಲಿಸೊ ಹಾಡು
ಕೊಂಚ ದಿವಸ ಒಳಗೆ ಆಡು.

*More Lyrics from [Kotigobba 3]*